ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/14/ಎಸ್‌ಟಿಎಸ್/2015 /3596

ನಿರ್ದೇಶಕರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ,
ಬೆಂಗಳೂರು-೫೬೦೦೦೧
ದಿನಾಂಕ: ೫-೨-೨೦೧೬

**ಸುತ್ತೋಲೆ**

ವಿಷಯ: **ತಾಂತ್ರಿಕ ಶಿಕ್ಷಣ ಇಲಾಖೆಯ ವತಿಯಿಂದ ಸರ್ಕಾರದ ವಿವಿಧ ಯೋಜನೆ/ಕಾರ್ಯಕ್ರಮಗಳ ಮಾಹಿತಿಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಒದಗಿಸುವ ಬಗ್ಗೆ.**

ಉಲ್ಲೇಖ: ೧. ಸರ್ಕಾರದ ಪತ್ರ ಸಂಖ್ಯೆ: ಇಡಿ 40 ವಿವಿಧ 2015 ದಿ:19.12.2015
೨. ನಿರ್ದೇಶನಾಲಯದ ಪತ್ರ ಸಂಖ್ಯೆ: ಡಿಟಿಇ/49/ಸಿಡಿಸಿ/2016 ದಿ: 30.1.2016

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹಾಗೂ ಉಲ್ಲೇಖಗಳ ಪತ್ರದನ್ವಯ ಸರ್ಕಾರದ ವಿವಿಧ ಯೋಜನೆ/ಕಾರ್ಯಕ್ರಮಗಳ ಮಾಹಿತಿಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಒದಗಿಸಲು ತಾಂತ್ರಿಕ ಶಿಕ್ಷಣ ಇಲಾಖಾವತಿಯಿಂದ ಹಮ್ಮಿಕೊಳ್ಳುತ್ತಿರುವ ವಿವಿಧ ಜನಪರ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಪತ್ರಿಕಾ ಪ್ರಕಟಣೆಗಳು, ಜಾಹೀರಾತು ಬಿಡುಗಡೆ, ಕರಪತ್ರ, ಕಿರು ಪುಸ್ತಕಗಳ ಬಿಡುಗಡೆ, ಹೆದ್ದಾರಿ ಫಲಕ, ವಸ್ತುಪ್ರದರ್ಶನ, ಕಿರುಚಿತ್ರ/ಸಾಕ್ಷಚಿತ್ರ, ಬೀದಿ ನಾಟಕ, ಫಲಾನುಭವಿಗಳೊಂದಿಗೆ ನೇರ ಸಂವಾದಕ್ಕೆ ಅವಕಾಶ ಕಲ್ಪಿಸುವ 'ಜನಮನ' ಹಾಗೂ ಇತರೆ ಕ್ಷೇತ್ರ ಪ್ರಚಾರ ತಂತ್ರಗಳನ್ನು ಹಮ್ಮಿಕೊಂಡು ಅವುಗಳನ್ನು ಸಂಬಂಧಿಸಿದ ಗ್ರಾಮ/ತಾಲ್ಲೂಕು/ಜಿಲ್ಲೆಗಳಲ್ಲಿ ವ್ಯಾಪಕವಾಗಿ ಪ್ರಚಾರ ನೀಡಲು ಸೂಚಿಸಲಾಗಿದೆ.

ಪ್ರಚಾರಕ್ಕೆ ನಿರ್ವಹಿಸಬಹುದಾದ ಕಾರ್ಯತಂತ್ರಗಳು:

- ಪ್ರತಿ ಜಿಲ್ಲೆಯಲ್ಲಿ ಪ್ರತಿ ತಿಂಗಳು ಆಯಾ ಸಂಸ್ಥೆಯ ಒಂದು ನಿರ್ದಿಷ್ಟ ಕಾರ್ಯಕ್ರಮಕ್ಕೆ ಪ್ರಚಾರ ನೀಡಬಹುದು.
- ಈ ನಿರ್ದಿಷ್ಟ ಕಾರ್ಯಕ್ರಮಕ್ಕೆ ಸೀಮಿತವಾದ ಫಲಾನುಭವಿಗಳನ್ನು ಗುರುತಿಸಿ ಅವರನ್ನು ಒಂದೆಡೆ ಸೇರಿಸಿ ಮಾಹಿತಿ ನೀಡುವುದು.
- ಈ ನಿರ್ದಿಷ್ಟ ಕಾರ್ಯಕ್ರಮದ ಮಾಹಿತಿ ಕುರಿತ ಪ್ರಕಟಣೆಗಳನ್ನು ಹೊರತಂದು, ವಿತರಿಸುವುದು.
- ಈ ಕಾರ್ಯಕ್ರಮಕ್ಕೆ ಪೂರಕವಾಗಿ ಬೀದಿ ನಾಟಕ, ವಿಚಾರ ಸಂಕಿರಣ, ವಸ್ತು ಪ್ರದರ್ಶನ, ಸಾಕ್ಷ್ಯ ಚಿತ್ರ ಪ್ರದರ್ಶನ, ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಬಹುದು.
- ಶಾಲಾ/ಕಾಲೇಜುಗಳಲ್ಲಿ ಯೋಜನೆಯ ಕುರಿತು ಕ್ವಿಜ್, ಚಿತ್ರಕಲಾ ಸ್ಪರ್ದೆ ಏರ್ಪಡಿಸಬಹುದು.
- ಯೋಜನೆಯ ಅನುಷ್ಠಾನ, ಪ್ರಗತಿಗಳ ಬಗ್ಗೆ ಮಾದ್ಯಮಗಳಿಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮುಖೇನ ವಿವರಗಳನ್ನು ಒದಗಿಸುವುದು.
- ಈ ಎಲ್ಲಾ ಪ್ರಚಾರ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಆಯಾ ಸಂಸ್ಥೆಗಳು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಜೊತೆಗೆ ಸಮನ್ವಯ ಹಮ್ಮಿಕೊಳ್ಳುವುದು.

.....೨

ಈ ನಿಟ್ಟಿನಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯಡಿ ಈಗಾಗಲೇ ಜಾರಿಯಲ್ಲಿರುವ ಹಾಗೂ ನೂತನ ಕಾರ್ಯಕ್ರಮಗಳ ಪ್ರಚಾರಕ್ಕೆ ಸಂಬಂಧಿಸಿದಂತೆ, ಎಲ್ಲಾ ವಿವರಗಳನ್ನು ***ವಾರ್ತಾ ಮತ್ತು ಪ್ರಚಾರ ಇಲಾಖೆಯ ಬೆಂಗಳೂರು ಕೇಂದ್ರ ಕಛೇರಿ ನಿರ್ದೇಶಕರ ಹಾಗೂ ಜಿಲ್ಲಾ ಮಟ್ಟದಲ್ಲಿ ಅದೇ ಇಲಾಖೆಯ ಸಹಾಯಕ ನಿರ್ದೇಶಕರ*** ಗಮನಕ್ಕೆ ತಂದು ಸರ್ಕಾರದ ಯೋಜನೆಗಳಿಗೆ ಹೆಚ್ಚಿನ ಪ್ರಚಾರ ನೀಡಲು ಅತ್ಯಂತ ಕಾಳಜಿವಹಿಸಿ ಇಲಾಖಾ ಅನುಮತಿಯೊಂದಿಗೆ ಕ್ರಮವಹಿಸುವಂತೆ ಸೂಚಿಸಲಾಗಿದೆ.

ಪ್ರಚಾರ ಕಾರ್ಯ ಹಮ್ಮಿಕೊಳ್ಳುವ ಮೊದಲು ಉಲ್ಲೇಖ(೨)ರಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ನೋಡಲ್ ಅಧಿಕಾರಿಯಾಗಿ ನೇಮಿಸಿರುವ ಶ್ರೀ ಸತೀಶ ರ. ಹುದ್ದಾರ, ಉಪ-ನಿರ್ದೇಶಕರು (ಸಾಂಖ್ಯಿಕ) (ದೂರವಾಣಿ ಸಂಖ್ಯೆ: 9742009008 ಹಾಗೂ ಮಿಂಚಂಚೆ ವಿಳಾಸ: dteprachaara@gmail.com) ಇವರಿಗೆ ಪ್ರಚಾರದ ವಿವರಗಳನ್ನು ಕಳುಹಿಸಿ ಅನುಮತಿ ಪಡೆಯಲು ಸೂಚಿಸಲಾಗಿದೆ. ಮೇಲಿನ ಎಲ್ಲಾ ಕ್ರಮಗಳನ್ನು ಅನುಮತಿಯೊಂದಿಗೆ ಅತ್ಯಂತ ಕಾಳಜಿವಹಿಸಿ ಜರುಗಿಸಲು ಈ ಮೂಲಕ ಸೂಚಿಸಲಾಗಿದೆ.

ನಿರ್ದೇಶಕರು

ಇವರಿಗೆ:

೧. ನಿರ್ದೇಶನಾಲಯದ ಎಲ್ಲಾ ಜಂಟಿ ನಿರ್ದೇಶಕರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
೨. ಎಲ್ಲಾ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು/ಪಾಲಿಟೆಕ್ನಿಕ್‌ಗಳು/ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರುಗಳ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
೩. ತಾಂತ್ರಿಕ ಶಿಕ್ಷಣ ಇಲಾಖೆಯ ನೋಡಲ್ ಅಧಿಕಾರಿ ಶ್ರೀ ಸತೀಶ ರ. ಹುದ್ದಾರ, ಉಪ-ನಿರ್ದೇಶಕರು (ಸಾಂಖ್ಯಿಕ) ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
೪. ಇ-ಆಡಳಿತ ಕೋಶದ ಸಮನ್ವಯ ಅಧಿಕಾರಿಯವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
೫. ನಿರ್ದೇಶಕರ ಆಪ್ತ ಶಾಖೆಗೆ ಮಾಹಿತಿಗಾಗಿ.